# ರುಚಿಕರ ಚೀ..



■ ಪ.ರಾಮಕೃಷ್ಣ ಶಾಸ್ತ್ರಿ

ಚೀನಾ ದೇಶದಿಂದ ಬಂದ ಈ ಹಣ್ಣಿಗೆ 'ಚೀ' ಎಂದೇ ಹೆಸರು. ನೇಪಾಳ, ಹಿಮಾಚಲ ಪ್ರದೇಶ ಸೇರಿದಂತೆ ಪೂರ್ವ ಏಷ್ಯಾದ ಬಹುತೇಕ ಭಾಗಗಳಲ್ಲಿ ಇದನ್ನು ಬೆಳೆಯುತ್ತಾರೆ. ಇದರ ಮರ ಗೃಹಾಲಂಕಾರಕ್ಕೂ ಜನಪ್ರಿಯ. ಎಂಟು ಇಂಚು ವ್ಯಾಸವಿರುವ ಈ ರುಚಿಕರ ಹಣ್ಣಿಗೆ ಹಿಪ್ಪು ನೇರಳೆ ಮತ್ತು ರಾಸ್ಬೆರಿಗಳ ಸಮ್ಮಿಶ್ರ ಆಕಾರ. ಅಂಜೂರದ ಸುಗಂಧ.

ಕಲ್ಲಂಗಡಿ ಹಣ್ಣಿನಂಥ ರುಚಿ ಮತ್ತು ತುಂಬ ಸಿಹಿಯಾಗಿದ್ದು ರಸಭರಿತವಾಗಿದೆ. ದೇಹಾರೋಗ್ಯ ರಕ್ಷಿಸುವ ಪೋಷಕಾಂಶಗಳು ಇದರಲ್ಲಿವೆ. ಕಾಯಿಗಳು ಹಸಿರಾಗಿದ್ದು, ಹಣ್ಣಾಗುವಾಗ ಕಪ್ಪುಮಿಶ್ರಿತ ಗುಲಾಬಿ ವರ್ಣವಾಗುತ್ತವೆ. ಮರದ ತುಂಬ ಗೊಂಚಲಾಗಿ ಹಣ್ಣು ಕೊಡುವುದು ಅದರ ವೈಶಿಷ್ಟ್ಯ.

ಅನೇಕ ವರ್ಷಗಳ ಕಾಲ ಬದುಕಿ ಫಲ ಕೊಡುವ ಚೀ ಹಣ್ಣಿನ ಮರ 25 ಅಡಿಗಿಂತ ಅಧಿಕ ಎತ್ತರವಾಗಿ ಬೆಳೆದು ವಿಶಾಲವಾಗಿ ಹರಡುತ್ತದೆ. ಇದರ ಎಲೆಗಳನ್ನು ಆಹಾರವಾಗಿ ನೀಡಿ ರೇಷ್ಮೆ ಹುಳ ಸಾಕಣೆ ಮಾಡಬಹುದು. ಹಣ್ಣನ್ನು ಹಾಗೆಯೇ ತಿನ್ನಬಹುದು. ತಂಪು ಪಾನೀಯಗಳು, ಮಿಲ್ಕ್ ಷೇಕ್, ಐಸ್‌ಕ್ರೀಂ, ಬೇಯಿಸಿ ವಿವಿಧ ಖಾದ್ಯಗಳು, ವೈನ್ ಇದೆಲ್ಲವನ್ನೂ ತಯಾರಿಸಬಹುದು. ಹಣ್ಣಿನ ಒಳಗೆ ಚಿಕ್ಕ ಬೀಜಗಳಿದ್ದರೂ ಗಿಡವನ್ನು ತಯಾರಿಸಲು ಕಸಿ ಮಾಡಲಾಗುತ್ತದೆ. ಕಿತ್ತಳೆಯ ಮಾತೃಗಿಡಕ್ಕೆ ಅದರ ಕಸಿ ಹೆಚ್ಚು ಹೊಂದುವುದಂತೆ.

ಗಿಡದಲ್ಲಿ ಉಭಯಲಿಂಗಿ ಹೂಗಳಿರುತ್ತವೆ. ಹೆಣ್ಣು ಹೂ ಮಾತ್ರ ಫಲವಾಗುತ್ತದೆ. ನೀರಿನ ಬರವನ್ನು ಸಹಿಸಿಕೊಳ್ಳಬಲ್ಲ ಚೀ ಮರ ಎಂಥ ಕಳಪೆ ಮಣ್ಣಿನಲ್ಲೂ ಬೆಳೆಯುತ್ತದೆ. ಆದರೆ ಉಷ್ಣಾಂಶ 25 ಡಿಗ್ರಿಗಿಂತ ಹೆಚ್ಚಿದ್ದರೆ ಫಲ ಕೊಡುವುದು ಕಡಿಮೆ.

